ಕರ್ನಾಟಕ ವಿಧಾನಸಭೆ

ಮಂಗಳವಾರ 12ನೇ ಜನವರಿ 1993 ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11–10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ಬೆಂಗಳೂರು–ಶಿವಮೊಗ್ಗ ಬ್ರಾಡ್‌ಗೇಜ್ ಲೈನಿನ ಕೆಲಸದ ಪ್ರಾರಂಭದಿಂದುಂಟಾದ ತೊಂದರೆಗೆ ಪರ್ಯಾಯ ವ್ಯವಸ್ಥೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಬೆಂಗಳೂರಿಗೆ ಬ್ರಾಡ್‌ಗೇಜ್ ಮಾಡಬೇಕು ಎಂದು ಈಗಾಗಲೇ ತೀರ್ಮಾನವಾಗಿದೆ. ಈ ತಿಂಗಳ ಕೊನೆಯಲ್ಲಿ ಇದರ ಕೆಲಸ ಪ್ರಾರಂಭವಾಗುತ್ತದೆ. ಈ ಕೆಲಸ ಪ್ರಾರಂಭವಾದರೆ ಇದು ಮುಗಿಯುವುದಕ್ಕೆ ಕನಿಷ್ಠ 2–3 ವರ್ಷಗಳು ಬೇಕಾಗುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಿದ್ದಾರೆ. ಈಗ ಶಿವಮೊಗ್ಗ ಬೆಂಗಳೂರಿಗೆ ಬ್ರಾಡ್‌ಗೇಜ್ ಕೆಲಸ ಪ್ರಾರಂಭವಾದರೆ ನಮ್ಮ ರಾಜ್ಯದ ನಾಲ್ಕು ಐದು ಜಿಲ್ಲೆಗಳ ಪ್ರಯಾಣಿಕರಿಗೆ ತೊಂದರೆ ಆಗುತ್ತದೆ. ತುಮಕೂರು, ಹಾಸನ, ಚಿಕ್ಕಮಗಳೂರು ಶಿವಮೊಗ್ಗ ಈ ಎಲ್ಲಾ ಜಿಲ್ಲೆಯ ಪ್ರಯಾಣಿಕರಿಗೆ ತೊಂದರೆ ಆಗುತ್ತಿದೆ. ಹಿಂದಿನ ಬಸ್ಸಿನ ವ್ಯವಸ್ಥೆಗೂ ಈಗಿನ ಟ್ರೈನಿನ ವ್ಯವಸ್ಥೆಗೂ ಹೋಲಿಸಿದರೆ ಟ್ರೇನ್‌ಗಳು ಇದ್ದರೂ ಸಹ ಬಸ್ಸಿಗೆ ಸಿಕ್ಕಾಪಟ್ಟೆ ರಷ್ ಇದೆ. ಇಂತಹ ಸಂದರ್ಭದಲ್ಲಿ ಈ ಟ್ರೇನ್ ನಿಲ್ಲಿಸಿಬಿಟ್ಟರೆ ಏನು ಗತಿ ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೋಸ್ಕರ ಸರ್ಕಾರ ಈ ದಿಕ್ಕಿನಲ್ಲಿ ಬದಲಿ ವ್ಯವಸ್ಥೆ ಏನಾದರೂ ಮಾಡುತ್ತದೆಯೇ ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ; ಶಿವಮೊಗ್ಗ ಬೆಂಗಳೂರಿಗೆ ಕನಿಷ್ಠ 20–25 ಬಸ್ಸುಗಳು ಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ. ಇದಕ್ಕೆ ಸರ್ಕಾರ ಏನಾದರೂ ಹೇಳಿಕೆ ಕೊಡುತ್ತದೆಯೇ? ಏಕೆಂದರೆ ಎಲ್ಲಾ ಜಿಲ್ಲೆಗಳಿಗೂ ತೊಂದರೆ ಆಗುತ್ತಾ ಇದೆ. ದಯವಿಟ್ಟು ಸರ್ಕಾರದ ಕಡೆಯಿಂದ ಕನಿಷ್ಠ ಒಂದು 10 ಆದರೂ ಸೂಪರ್ ಡಿಲಕ್ಸ್ ಬಸ್‌ಗಳು ಬೇಕಾಗುತ್ತದೆ ಮತ್ತು 10–15 ಬೇರೆ ಆರ್ಡಿನರಿ ಬಸ್‌ಗಳು ಬೇಕಾಗುತ್ತವೆ. ಈ ದಿಕ್ಕಿನಲ್ಲಿ ಸರ್ಕಾರ ಹೇಳಿಕೆ ಕೊಡುತ್ತದೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇದನ್ನು ಇಡೀ 4–5 ಜಿಲ್ಲೆಯ ಜನತೆಯ ಪರವಾಗಿ ಕೇಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು):– ನಾನು ಸಾರಿಗೆ ಮಂತ್ರಿಗಳ ಗಮನಕ್ಕೆ ತಂದು ಅವರಿಂದ ತಮಗೆ ತಿಳಿಸುತ್ತೇನೆ.

2) ಮಲೆನಾಡು ಅಭಿವೃದ್ಧಿ ಮಂಡಳಿಯ ಕಾರ್ಯಾರಂಭ

ಶ್ರೀ ಬಿ.ಎಸ್. ಯಡಿಯೂರಪ್ಪ:– ತಮಗೆ ಗೊತ್ತಿರುವ ಹಾಗೆ ಹಿಂದಿನ ಸರ್ಕಾರ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡುತ್ತೇವೆ ಎಂದು ಘೋಷಣೆ ಮಾಡಿದರು. ಅದು ರಚನೆಯೂ ಆಯಿತು. ಶಿವಮೊಗ್ಗ ಜಿಲ್ಲಾಪರಿಷತ್ತಿನ ಒಬ್ಬ ಕಾರ್ಯದರ್ಶಿಗಳೂ ಬಂದರು. ಮೂರು ತಿಂಗಳು ಸಂಬಳ ಕೊಟ್ಟುಕೊಂಡು ಅಲ್ಲಿ ಅವರು ಇದ್ದಾರೆ. ಆದರೆ ಇದುವರೆಗೂ ಈ ಅಭಿವೃದ್ಧಿ ಮಂಡಲಿಗೆ ಅಧ್ಯಕ್ಷರವರನ್ನು ನೇಮಕ ಮಾಡದ ಪರಿಣಾಮ ಏನು ಆ ಇಡೀ ಮಲೆನಾಡು ಅಭಿವೃದ್ಧಿಗೋಸ್ಕರ ಎಸ್ಟಿಮೇಟ್ ಪ್ಲಾನ್ ಮಾಡಿದ್ದರು ಅಲ್ಲಿ ಈ ಕೆಲಸ ಆಗಿಲ್ಲ. ಎಲ್ಲೂ ಏನೂ ಕೆಲಸ ಆಗದೆ ಇದು ಗೊಂದಲದಲ್ಲಿ ಇದೆ. ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿ, ಈ ವರ್ಷದಿಂದಲೇ ಅದಕ್ಕೆ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ? ಕೆಲಸ ಏನಾದರೂ ಪ್ರಾರಂಭ ಮಾಡುತ್ತೀರಾ? ಅಧ್ಯಕ್ಷರನ್ನು ಯಾರನ್ನು ಮಾಡುತ್ತಿದ್ದೀರಿ? ತಾವು ಈ ದಿನ ನಮಗೆ ಅದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಎಂದು ವಿನಂತಿ ಮಾಡುತ್ತೇನೆ.